ಆಗ ಆ ಚೋಟುದ್ದ ಹಾವು ರೂಮಿನೊಳಗೆ ನುಗ್ಗಿಬಿಟ್ಟರೆ ಏನು ಮಾಡ್ತೀಯಾ?' ನನ್ನೊಳಗಿನ ದನಿ ತಿವಿದು ಕೇಳಿದಾಗ ಮೆಲ್ಲಗೆ ಕೈ ಕಾಲು ಥರಗುಟ್ಟಿತ್ತು.

ಆಗಲೇ ಓಣಿ ಪ್ರವೇಶಿಸಿದ್ದೆ. ಶಾಂತಕ್ಕನ ಮನೆಯ ಮುಂದೆ ಜನ ಜಮಾಯಿಸಿ ಭಯ, ಕುತೂಹಲ ಮಿಶ್ರಿತ ದೃಷ್ಟಿ ಹರಿಬಿಟ್ಟು ತಮ್ಮೊಳಗೇ ಕುಸು ಪುಸು ಮಾತಾಡುತ್ತ ಸ್ಥಳ ಮಹಜರ್ ನಡೆಸಿದ್ದರು. ನಾನೂ ಅವರೊಳಗೊಬ್ಬಳಾಗಿ, ಹೆಚ್ಚಿನ ಮಾಹಿತಿ ಸಂಗ್ರಹಕ್ಕೆ ನಿಂತೆ.

ಏನಾತ್ರಿ ಅಣ್ಣಾರ? ಹಾಂವು ಮನಿಯೊಳಗ ಏತೇನ್ರಿ? ಗೇಟಿನೊಳಗೆ ಉದ್ದುದ್ದವಾಗಿ ಗೋಣು ತೂರಿ ಸರ್ವೆ ನಡೆಸುತ್ತಿದ್ದ ಸಣಕಲ ಮನುಷ್ಯನೊಬ್ಬನನ್ನು ಕೇಳಿದೆ. 'ಅದೇ ಗೊತ್ತಾಗವಲ್ತು ನೋಡ್ರಿ. ರೊಟ್ಟಿ ಸುಡಾಕ ಅಂತ ಹಿತ್ತಲದಾಗ ಥೀಗ ಕಟಗಿ ವಟ್ಯಾರ. ಮತ್ತ ಹಾಂವು ಹರಣೀ ಕೂಡೂವ ಮತ್ತ'. ಆತ ತನ್ನ ಘನ ಸಿದ್ಧಾಂತ ಪ್ರತಿಪಾದಿಸಿ, ತನ್ನ ಕೆಲಸ ಮುಂದುವರಿಸಿದ್ದ. ನನ್ನ ಪ್ರಶ್ನೆಗೆ ಉತ್ತರ ಮಾತ್ರ ಸಿಗಲಿಲ್ಲ. ನಾನೂ ಮೆಲ್ಲಗೆ ಅಂಜುತ್ತ ಅಂಗಳದಲ್ಲಿ ನಿಂತಿದ್ದ ಶಾಂತಕ್ಕನತ್ತ ಸಾಗಿ ತುಂಬ ಸಹನೆಯಿಂದ, ಅಷ್ಟೇ ಕೆಟ್ಟ ಕುತೂಹಲದಿಂದ ಪ್ರಶ್ನೆ ಪುನರುಚ್ಚರಿಸಿದೆ.

'ಗೊತ್ತಿಲ್ಲ ಯವ್ವಾ. ಆಗಾಳೇ ಕಟಗಿ ರಾಶಿ ವಳಗಿಂದ ಬಡಕ್ಕನ ಎದ್ದು ಹೊರಗ ಬಂತಂತ. ನಮ್ ದೊಡ್ ಹುಡುಗಿ ಚೀರ್ಕೊಂಡಾಳ. ಅದೂ ಅಂಜಿ ಎಲ್ಲೋ ಕುಂತೇತಿ'.

'ಹಾಂವು ಯಂತಾದಿತ್ತು ತಂಗೀ, ಬೆಳ್ಳಗಿತ್ತೋ ಕರ್‍ರಗಿತ್ತೋ? ಹೆಡಿ ಬಿಚ್ಚಿತ್ತೇನು? ಬಾಲಾ ಚೂಪ ಇತ್ತೊ? ಮಂಡ್ ಇತ್ತೊ? ಯಾಕಂದ್ರ ಅದು ಛಲೋ ಹಾವಿತ್ತಂದ್ರ ಕೊಲ್ಲಾಕ ಬರಾಂಗಿಲ್ಲಾ. ಹಿಂದಾಗಡೆ ನಾಗದೋಷ ಅಮರಿಕೊಂಡಿತಂದ್ರ ಏಳು ಜಲಮಕ್ಕೂ ಸುತ್ತಿ ಹೊಡೀತದಂತ. ಅದಕ್ಕ ಮದ್ಲ ಇದನ್ನು ತಿಳಕೋ ಬೇಕಾಗ್ತದ...' ತಲೆ ನೆರೆತ ಮುದುಕನೊಬ್ಬ ಉರಗತಜ್ಞನಂತೆ ಪ್ರಶ್ನಿಸಿದ್ದಲ್ಲದೇ ಜನ್ಮಾಂತರದ ಕಥೆ ಹೇಳಿ ಇನ್ನಷ್ಟು ತಲೆಕೆಡಿಸಿಬಿಟ್ಟ.

ಹುಡುಗಿ ಭಯ ಬಿದ್ದು ಬೆಪ್ಪಳಂತೆ ಗಪ್ಪ ನಿಂತು ಬಿಟ್ಟಿತ್ತು. 'ಯಪ್ಪಾ ಚಂಜೀಯಾಗಾಕ ಬಂತು. ಯಾರಾದ್ರೂ ಅದನ್ನ ಹುಡುಕಿ ಬಡೀರಪಾ' ಶಾಂತಕ್ಕ ಅಶಾಂತಿಯಿಂದ ವದರಿದಳು. 'ಅಲ್ಲಾ ಹಾಂಗ ಗಬಕ್ಕನ ಸಾಯಿಸಿ ಬಿಡಬ್ಯಾಡ್ರೋ. ಅದು ಕಡಿಯೋ ಹಾಂವು ಹೌದೋ ಅಲ್ಲೋ ನೋಡ್ಕೋರಿ. ಪಾಪ ಇಲಿ ಹಿಡ್ಯಾಕ ಅಂತ ಆ ಕೆರಿ ಹಾಂವುಗಳು ಹೀಂಗ ಸಂದಿಯಾಗ ನುಗ್ಗಿರ್ತಾವು...' ಹಾವು ಹುಡುಕಿ ಬಡಿಯಲೆಂದು ಬಡಿಗೆ ಹಿಡಿದು ಎಲ್ಲೆಡೆ ಹುಡುಕುತ್ತಿದ್ದ ಹುಡುಗರಿಗೆ ಗುಡಿ ಪೂಜಾರಿಯ ಮಾತು ಕೇಳಿ ತಲಿ ಗೆಂವ್ ಅಂದಿರಬೇಕು.

'ಯಜ್ಜಾ ಬಾ ಇಲ್ಲಿ. ಹೀಂಗ ಕಾಲು ನೀಡಿ ನಿಂದ್ರು ಹಾಂವು ಹುಡುಕಿ ವಗೀತೇವಿ. ಕಡದ್ರ ಬಡಿಯೋಣಂತ. ಇಲ್ಲಾಂದ್ರ ಬಿಟ್ರಾತು'. ಹುಡುಗರಲ್ಲಿ ಒಬ್ಬ ಪೂಜಾರಪ್ಪನತ್ತ ಸುಡುಗಣ್ಣಿಲೆ ನೋಡುತ್ತ ನುಡಿದ ಪರಿಗೆ ಆ ಯಪ್ಪ ಮೆಲ್ಲಗೆ ಪೇರಿ ಕಿತ್ತಿದ್ದ. 'ದೊಡವ್ವಾ ನಾ ಮನೀ ಒಳಗ ಬ್ಯಾಟ್ರೀ ಬಿಟ್ಟು ವಮ್ಮಿ ಛಂದಾಗಿ ಹುಡುಕಿ ಬರಲೇನು?' ತುಡುಗು ಪಕ್ಯಾ ಅಷ್ಟರಾಗ ತನ್ನ ಕೈ ಕೆರೆತ ಶಮನಗೊಳಿಸಿಕೊಳ್ಳುವ ಹುನ್ನಾರು ನಡೆಸಿದ್ದು ಗುಂಪಿನಲ್ಲಿ ಎಲ್ಲರಿಗೂ ತಿಳಿದು, 'ಹೇ ಬ್ಯಾಡಾ. ನೀ ಸರಿದು ನಿಂದ್ರು' ಎಂದು ಚೀರಿದರು.

'ಹೇ... ನಮ್ ಭೀಮ್ಯಾ ಬಂದಾ. ಭೀಮಪ್ಪಾ ಬಾರಲೇ' – ಹಾವು ಹುಡುಕಿ ಹೊಡೆಯುವಲ್ಲಿ ನಿಸ್ಸೀಮನೆನಿಸಿದ್ದ ವಣಕಲು ದೇಹದ 'ಭೀಮ ನಾಮಿ' ಒಳ್ಳೇ ಹೀರೊ ಗತ್ತಲ್ಲಿ ಜನರಿಂದ ಉಘೇ ಉಘೇ ಅನ್ನಿಸಿಕೊಳ್ಳುತ್ತ ಗುಂಪಿನಲ್ಲಿ ನುಗ್ಗಿ ಅಂಗಳಕ್ಕೆ ಬಂದ. ಧೈರ್ಯಕ್ಕೆ ಇರಲಿ ಅಂತಲೋ ಏನೋ ಒಂದು ಪ್ಯಾಕೆಟ್ ಹಾಕಿಕೊಂಡೇ ಬಂದಾನ... ಅವನ ಚಾರು ಚರ್ಯೆ ನೋಡಿ ನಾನು ಒಳಗೇ ಗೊಣಗಿಕೊಂಡೆ. ಶಾಂತಕ್ಕ, ಆ ದೇವರೇ ಪ್ರತ್ಯಕ್ಷನಾದಂತೆ ಅವನತ್ತ ಕರವೆತ್ತಿ ಮುಗಿದು ಶರಣಾಗಿಬಿಟ್ಟಿದ್ದಳು.

'ಅವ್ವಾ ಹಾಂವು ಎಲ್ಲಿ ಕುಂತಿತ್ತು? ಎಷ್ಟೊತ್ತಿನ್ಯಾಗ?' ಎಂದೆಲ್ಲಾ ಬರೋಬ್ಬರಿ ಹತ್ತು ಹಲವಾರು ಪ್ರಶ್ನೆ ಹಾಕಿ, 'ಅದು ಹಾಂಗದ್ರ ಮನೀ ವಳಗ ಹೋಗಾಕ ಸಾಧ್ಯನೇ ಇಲ್ಲಾ. ಅಲ್ಲೇ ಕಟಗಿ ರಾಶಿಯಾಗ ರಬ್ಬಿ ಕುಂತಿರ್ತೆತಿ. ಇಷ್ಟ್ ಮಂದಿ ಗದ್ದಲದಾಗ ಅದ್ಕೂ ಅಂಜಿಕಿ ನೋಡ್ರಿ' ಎನ್ನುತ್ತ ಉದ್ದನ ಬಡಿಗೆಯಿಂದ ಸಂದಿ, ಮೂಲೆ, ಕಸದ ಗುಡ್ಡೆ, ಬೂದಿ ಗುಡ್ಡೆ ಎಲ್ಲ ಕೆದರುತ್ತ ಹುಶ್ ಹುಶ್ ಎಂದು ಸಪ್ಪಳ ಮಾಡುತ್ತ ಚೂಪುಗಣ್ಣು ಮಾಡಿ ಹುಡುಕುತ್ತ ಮನೆಯ ಹಿತ್ತಲಿನ ಕಟ್ಟಿಗೆ ರಾಶಿಯತ್ತ ಧಾವಿಸಿದ. ಈಗ ನೆರೆದವರಿಗೆ ಮೆಲ್ಲಗೆ ಪುಕುಪುಕು ಶುರುವಾಯ್ತು. ಅವನ ದೊಣ್ಣೆಯ ತಿವಿತಕ್ಕೆ ಹಾವು ಯಾವ ಗುಡ್ಡೆಯಿಂದ ಭರಕ್ಕನೆ ಎದ್ದು ಸರಕ್ಕನೆ ತಮ್ಮೆಡೆ ಬರುತ್ತದೆಯೋ ಗೊತ್ತಿಲ್ಲ. ಮೆಲ್ಲಗೆ ಎಲ್ಲರೂ ಹಿಂಗಾಲಲ್ಲೇ ನಡೆದು ಗೇಟು ದಾಟಿ ರಸ್ತೆಯಲ್ಲಿ ನಿಂತು ದೂರ ದರ್ಶನಕ್ಕೆ ತೊಡಗಿಯಾಗಿತ್ತು. ಆತ ಮಾತ್ರ ಹಶ್ ಹಶ್ ಎನ್ನುತ್ತ ಪುಸು ಪುಸು ಮೂಗಾಳಿ ತಗೊಳ್ಳುತ್ತ ಕಟ್ಟಿಗೆಯ ರಾಶಿಯಿಂದ ಕಟ್ಟಿಗೆ ಎಳೆದೊಗೆದು ಹುಡುಕತೊಡಗಿದ್ದ.

ಎರಡು ಮೂರು ಕಡೆ ಕೆದಕಿ, ಏನೋ ಅನುಮಾನ ಬಂದಂತೆ ಚಕ್ಕನೆ ಮೊಬೈಲ್ ಬ್ಯಾಟರಿ ಹೊತ್ತಿಸಿ ಸಂದಿಗೊಂದಿಯಲ್ಲಿ ಬೆಳಕು ಚೆಲ್ಲಿದ. 'ಹಾಂವು ಇಲ್ಲೇ ಐತ್ರಲೇ' ಎಂದು ಭಡ್ ಭಡ್ ಬಡಿದ ಆ ಪರಿಗೆ ನನ್ನ ಜೀವ ಚುರ್ ಅಂತು. ಪಾಪ ಬಡಪಾಯಿ. ಅಂಜಿ ಅಡಗಿ ಕೂತರೂ ಹುಡುಕಿ ಕೊಂದೇ ಬಿಟ್ರೇ... ಒಳಗೇ ಮಿಡುಕಿದೆ.

ಆತ ಸತತವಾಗಿ ಬಡಿದು, ಅದನ್ನು ಹೊರಗೆಳೆದು, ಅದೇ ಕೋಲ ಮೇಲಿ ಹಾಕಿಕೊಂಡು, ವಿಜಯಪತಾಕೆಯಂತೆ ಹಿಡಿದೆತ್ತಿ ತಂದು, ಎಲ್ಲರೆದುರು ದೊಪ್ಪನೆ ಬಿಸಾಡಿದ. ನೆರೆದ ಜನ ಯಾರೂ ಒಂದು ಹೆಜ್ಜೆ ಮುಂದೆ ಹೋಗಿ ಹಣಕುವ ಧೈರ್ಯ ಮಾಡಲಿಲ್ಲ. ಒಂದು ವೇಳೆ ಜೀವ ಹೋಗಿರದಿದ್ದರೆ? ಎಂಬ ಪ್ರಶ್ನೆ ನನ್ನನ್ನು ಮೊದಲುಗೊಂಡು ಎಲ್ಲರನ್ನು ಕಾಡಿತ್ತು. ಕ್ಷಣ ಕಳೆದು, ಶಾಂತಕ್ಕನ ಸಣ್ಣಮಗ ಮಂಜ ಹಾವು ಬಿಸಾಡಿದ್ದಲ್ಲಿ ಮೆಲ್ಲಗೆ ಬಂದು ಕುತೂಹಲದಿಂದ ಹಣಕಿದ.

ಒಂದು ಚಿಕ್ಕ ಕೋಲಿನಿಂದ ಅಲುಗಾಡಿಸಿದವನೇ 'ಅಯ್ಯ ಇದು ನಂದು. ಹ್ವಾದ ವರ್ಷ ಮೂರು ಸಾವಿರ ಮಠದ ಜಾತ್ರಿನಾಗ ತಗೊಂಡಿದ್ದು. ಕಡೀಕೂ ಸಿಕ್ತು ನೋಡು' ಎಂದು ಗಬಕ್ಕನೆ ಎತ್ತಿ ಆಡಿಸತೊಡಗಿದ. ಅದೂ ಕೆಂಪು ನಾಲಿಗೆ ಚಾಚಿ ಉದ್ದುದ್ದಕ್ಕೆ ಆಡತೊಡಗಿದಾಗ ಶಾಂತವ್ವ 'ಅಯ್ಯ ನನ್ ಹಣೆಬಾರಾ' ಎಂದು ತಲೆ ಮೇಲೆ ಕೈ ಹೊತ್ತುಕೊಂಡಳು. ಮಂಜ ಆ ರಬ್ಬರ್ ಹಾವನ್ನು ಹಿಡಿದು ಅಕ್ಕಂದಿರನ್ನು ಹೆದರಿಸಿ ವಿಪರೀತ ಗೋಳು ಹೊಯ್ದುಕೊಳ್ಳುತ್ತಿದ್ದರಿಂದ ಸಿಟ್ಟಿಗೆದ್ದ ಶಾಂತವ್ವ ಅದನ್ನೆತ್ತಿ ಕತ್ತಲೆಯಲ್ಲಿ ಹೊರಗೆ ಬಿಸಾಡಿದಾಗ ಕಟ್ಟಿಗೆ ರಾಶಿಯೊಳಗೆ ತೂರಿಕೊಂಡಿತ್ತು.

ಅಷ್ಟೊತ್ತು ಗಾಬರಿಯಿಂದ ಉಸಿರು ಹಿಡಿದಿದ್ದವರೆಲ್ಲ ಒಮ್ಮೆಲೆ ನಿರಾಳವಾಗಿ ಉಸಿರೆಳೆದುಕೊಂಡು, 'ಅಂದ್ರೂ ಹಾಂವು ಭಾರಿ ಇತ್ತು ಬಿಡಪಾ' ಅಂತ ತಲೆಗೊಂದು ಮಾತಾಡುತ್ತ, ಕುಂಟುಚಾಷ್ಟಿ ಮಾಡುತ್ತ, ಕಿಸಿ ಕಿಸಿ ನಗುತ್ತ, ಮನೆಯ ಹಾದಿ ಹಿಡಿದಿದ್ದರು. ನಾನೂ ಅವರೊಳಗೊಬ್ಬಳಾಗಿ, ಗುಂಪಿನಲ್ಲಿ ಗೋವಿಂದ ಅನ್ನುತ್ತ ಹೊರಟಿದ್ದೆ.

ಪ್ರತಿಕ್ರಿಯಿಸಿ: feedback@sudha.co.in